**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 9 ಪ್ರಾ.ಸಾ. : 3**

ಸಾಕ್ಷಿಯ ಹೆಸರು : ಮಂಜುನಾಥ
ತಂದೆಯ ಹೆಸರು : ನಾರಾಯಣ ನಾಯ್ಕ
ವಯಸ್ಸು : 62 ವರ್ಷ
ಉದ್ಯೋಗ : ನಿವೃತ್ತ ಕಾರ್ಯದರ್ಶಿ
ವಾಸ : ಭಟ್ಕಳ

**ದಿನಾಂಕಃ 21-04-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು 2004 ರಿಂದ 2008-09 ರವರೆಗೆ ಕಾನಗೋಡ ಗ್ರಾಮ ಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೆ. ನಾನು ಅಲ್ಲಿ ಕಾರ್ಯ ನಿರ್ವಹಿಸುವಾಗ ಲೋಕಾಯುಕ್ತ ಪೊಲೀಸ್ ನವರು ನನ್ನ ಬಳಿ ಕೆಲವು ಮಾಹಿತಿಯನ್ನು ಕೇಳಿದ್ದರು. ಸುಲಭ ಶೌಚಾಲಯ ಯೋಜನೆಗೆ ಸಂಬಂಧಿಸಿದ್ದ ದಾಖಲಾತಿಗಳನ್ನು ಕೇಳಿದ್ದರು. ಸದರಿ ಗ್ರಾಮ ಪಂಚಾಯತಿಯ ಹಳ್ಳಿ ಬೈಲು , ಕಾನಗೋಡು ಇನ್ನೂ ಎರಡು ಮೂರು ಮಜರೆ ಗ್ರಾಮಗಳ ದಾಖಲಾತಿಗಳನ್ನು ಆ ಯೋಜನೆ ಬಗ್ಗೆ ಕೇಳಿದ್ದರು . ಆ ಯೋಜನೆಯಡಿಯಲ್ಲಿ ಅವ್ಯವಹಾರ ಆಗಿದೆ ಎಂದು ದಾಖಲಾತಿ ಕೇಳಿದ್ದರು . ಆಗ ಆರೋಪಿ ಆ ಗ್ರಾಮ ಪಂಚಾಯತಿಯಲ್ಲಿ ಅಧ್ಯಕ್ಷರಾಗಿದ್ದರು . ನಾನು ಕೊಟ್ಟ ದಾಖಲಾತಿಗಳನ್ನು ಪಂಚನಾಮೆ ಮಾಡಿ ಜಪ್ತು ಮಾಡಿದರು . ಆ ಪಂಚನಾಮೆಗೆ ನಾನು ರುಜು ಮಾಡಿದ್ದೇನೆ . ಈಗ ಆ ಪಂಚನಾಮೆ ನೋಡಿರುತ್ತೇನೆ . ಅದರಲ್ಲಿ ನನ್ನ ರುಜು ಇದೆ . ಪಂಚನಾಮೆಯನ್ನು ಈಗಾಗಲೇ ನಿ.ಪಿ. 7 ಎಂದು ಗುರುತಿಸಲಾಗಿದೆ . ಸಾಕ್ಷಿಯ ರುಜುವನ್ನು ನಿ.ಪಿ. 7(ಬಿ) ಎಂದು ಗುರುತಿಸಲಾಯಿತು. ಆಗ ನಾನು ನೀಡಿದ ದಾಖಲಾತಿಗಳನ್ನು ನೋಡಿದರೆ ಗುರುತಿಸುತ್ತೇನೆ. ನಿ.ಪಿ. 8 ರಿಂದ 25 ಈಗ ನೋಡಿದ ದಾಖಲಾತಿಗಳನ್ನು ನಾನು ಆ ಪಂಚನಾಮೆ ಸಮಯದಲ್ಲಿ ಲೋಕಾಯುಕ್ತ ಪೊಲೀಸ್ ನವರಿಗೆ ನೀಡಿರುತ್ತೇನೆ .

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

2. ಈ ದಾಖಲಾತಿಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆಯಾ ಎಂದರೆ ಈಗ ನನಗೆ ಹಾಲಿ ನೆನಪಿಲ್ಲ. ನಿ.ಪಿ. 8 ರಿಂದ 25 ದಾಖಲಾತಿಗಳನ್ನು ನನಗೆ ಮೊದಲು ಇದ್ದ ಕಾರ್ಯದರ್ಶಿ ತಯಾರಿಸಿರುತ್ತಾರೆ . ಅವರ ಹೆಸರು ಶಂಕರನಾರಾಯಣ ಪರಮೇಶ್ವರ ಭಟ್ಟ ಈಗ ಅವರು ಎಲ್ಲಿದ್ದಾರೆ ಎಂದು ಗೊತ್ತಿಲ್ಲ. ಆದರೆ ನಿವೃತ್ತಿಯಾಗಿದ್ದಾರೆ . ನಿ.ಪಿ. 8 ರಿಂದ 25 ದಾಖಲಾತಿಗಳಲ್ಲಿ ಏನು ತಪ್ಪಾಗಿದೆ ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಈಗ ನಾನು ಅವುಗಳನ್ನು ಪರಿಶೀಲಿಸಿದರೂ ನನಗೆ ಅದರಲ್ಲಿ ಏನು ತಪ್ಪು ಇದೆ ಎಂದು ಹೇಳಲು ಆಗುವುದಿಲ್ಲ. ಲೋಕಾಯುಕ್ತ ಪೊಲೀಸ್ ನವರಿಗೆ ಹೇಗೆ ಬೇಕೋ ಆ ರೀತಿ ನಾನು ತಯಾರಿಸಿ ನಿ.ಪಿ. 8 ರಿಂದ 25 ದಾಖಲಾತಿಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ದಾಖಲಾತಿಗಳಿಗೂ ಸಂಬಂಧ ಇಲ್ಲ ಎನ್ನುವುದು ನನಗೆ ಗೊತ್ತಿಲ್ಲ ಆದರೆ ಆ ದಾಖಲಾತಿಗಳನ್ನು ನಾನು ನೀಡಿದ್ದೇನೆ. ನಾನು ಹೇಳಿದ ಪ್ರಕಾರ ನಿ.ಪಿ. 7 ಪಂಚನಾಮೆಯಡಿಯಲ್ಲಿ ಆ ದಾಖಲಾತಿಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಲೋಕಾಯುಕ್ತರವರು ತಯಾರು ಮಾಡಿಕೊಂಡ ದಾಖಲೆಗಳಿಗೆ ನಾನು ಸಹಿ ಮಾಡಿ ಅವುಗಳು ನನ್ನ ಕಚೇರಿಯಲ್ಲಿ ಇದ್ದ ದಾಖಲಾತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ